

# ಸನಾತನ ಹಿಂದೂ ಧರ್ಮ

ಎದುರ್ಕಳ ಕೆ. ಶಂಕರನಾರಾಯಣ ಭಟ್

ಹಿಂದೂಧರ್ಮದ ವೈಶಿಷ್ಟ್ಯಗಳನ್ನು ಹೇಳುವುದರ ಮೂಲಕ ಅದರ ಒಂದು ಸ್ಥೂಲ ಪರಿಚಯವನ್ನು ನೀಡಿರುವ ಶ್ರೀ ಶಂಕರನಾರಾಯಣ ಭಟ್ ಅವರು ಹಿಂದೂಧರ್ಮ ಮತ್ತು ಸಂಸ್ಕೃತಿಯ ವಿಶೇಷ ಅಧ್ಯಯನ ನಡೆಸಿ ಆ ವಿಷಯಗಳ ಬಗ್ಗೆ ಹಲವಾರು ಗ್ರಂಥಗಳನ್ನು ರಚಿಸಿರುವರು.

**ಪ್ರಪಂಚದ** ಧರ್ಮಗಳಲ್ಲೆಲ್ಲಾ ಹಿಂದೂಧರ್ಮವು ಅತ್ಯಂತ ಪುರಾತನವಾದುದಾಗಿದೆ. ಇತರ ಧರ್ಮಗಳೊಡನೆ ಕಾಲದ ಸಂಬಂಧವಾಗಿ ಹೋಲಿಸುವಾಗ ಈ ಧರ್ಮವು ಪ್ರಾಚೀನವಾದುದು ಎಂದು ಹೇಳುವುದಷ್ಟೇ ವಿನಃ ನಿಜವಾಗಿ ಹೇಳುವುದಾದರೆ ಹಿಂದೂಧರ್ಮವು ಒಬ್ಬ ವ್ಯಕ್ತಿಯಿಂದ ಒಂದು ಕಾಲದಲ್ಲಿ ಸ್ಥಾಪಿತಗೊಂಡ ಧರ್ಮವಾಗಿರುವುದಿಲ್ಲ. ಆದುದರಿಂದಲೇ ಹಿಂದೂ ಧರ್ಮವನ್ನು ಸನಾತನ ಧರ್ಮ ಎಂದು ಕರೆಯಲಾಗಿದೆ. ಸನಾತನ ಧರ್ಮ ಎಂದರೇನು? ಸದಾ ಕಾಲಕ್ಕೂ ಸಚೇತನವಾಗಿ ಶಾಶ್ವತವಾಗಿ ಉಳಿಯುವ ಧರ್ಮ ಎಂದು ತಾತ್ಪರ್ಯ. ಸನಾತನ ಎಂದರೆ ಭಗವಂತ ಎಂಬ ಅರ್ಥವೂ ಇದೆ. ಹಾಗಾಗಿ ಸನಾತನ ಧರ್ಮ ಎಂದರೆ ಭಗವಂತನಿಂದ ಸ್ಥಾಪಿಸಲ್ಪಟ್ಟ ಧರ್ಮ ಎಂದು ಅರ್ಥವಾಗುತ್ತದೆ. ಭಗವಂತನು ಹುಟ್ಟು ಸಾವುಗಳು ಎಲ್ಲೆ ಕಟ್ಟುಗಳಿಗೆ ಮೀರಿದವನಾಗಿದ್ದು ಅನಾದಿ ಅನಂತನಾಗಿರುವುದರಿಂದ ಅವನ ಧರ್ಮವೂ ಅನಾದಿ-ಅನಂತವಾಗಿರುತ್ತದೆ. ಸನಾತನ ಧರ್ಮ ಎಂದರೆ ಮಾನವನನ್ನು ಜನ್ಮ-ಮರಣಯುಕ್ತವಾದ ಸಂಸಾರ ಬಂಧನದಿಂದ ಮುಕ್ತನನ್ನಾಗಿಸಿ ಶಾಶ್ವತವಾದ ಆನಂದದ ಪದವಿಯನ್ನು ಸೇರಿಸುವ ಧರ್ಮ ಎಂಬ ಅರ್ಥವೂ ಇದೆ.

ಸನಾತನ ಧರ್ಮವನ್ನು ರೂಢಿಯಲ್ಲಿ ಹಿಂದೂಧರ್ಮ ಎಂದು ಕರೆಯಲಾಗುತ್ತಿದ್ದು ಈ ಹೆಸರು ಇತಿಹಾಸ ಕಾಲದಲ್ಲಿ ಕೂಡಿ ಬಂದಿರುತ್ತದೆ. ಸಿಂಧೂನದಿಯ ತೀರದಲ್ಲಿ ವಾಸಿಸುತ್ತಿದ್ದ ನಮ್ಮ ಹಿರಿಯರನ್ನು ಪರ್ಷಿಯನ್ನರು ಹಿಂದುಗಳು ಎಂದು ಕರೆದರು. ಹಿಂದುಗಳ ಧರ್ಮ ಹಿಂದೂಧರ್ಮ ಎಂದು ಪ್ರಖ್ಯಾತವಾಯಿತು.

ಪ್ರತಿಯೊಬ್ಬ ಹಿಂದುವೂ ಅಪೌರುಷೇಯವಾದ, ಪ್ರಾಚೀನ ವೈದಿಕ ಮಹರ್ಷಿಗಳಿಗೆ ಅಂತರಂಗ ಧ್ಯಾನದಲ್ಲಿ ಹೊಳೆದ ದಿವ್ಯಸತ್ಯದ ವಿಚಾರಗಳನ್ನು ಒಳಗೊಂಡ ವೇದಗಳನ್ನು ತನ್ನ ಮತಧರ್ಮದ ಆಧಾರಸ್ತಂಭಗಳೆಂದು ನಂಬಿ ಗೌರವಿಸುತ್ತಾನಾದ್ದರಿಂದ ಹಿಂದೂ ಧರ್ಮವನ್ನು ವೈದಿಕಧರ್ಮ ಎಂದೂ ಕರೆಯುತ್ತಾರೆ. ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದ ಎಂಬ ನಾಲ್ಕು ವೇದಗ್ರಂಥಗಳಲ್ಲಿ ಮಾನವನ ಲೌಕಿಕ ಮತ್ತು ಪಾರಮಾರ್ಥಿಕ ಜೀವನ ಸಿದ್ಧಿಗೆ ಬೇಕಾದ ಸಮಗ್ರತತ್ತ್ವ ಮತ್ತು ಅನುಷ್ಠಾನ ವಿವರಗಳು ವಿಸ್ತಾರವಾಗಿ ಒಳಗೊಂಡಿರುವುದು ವೈದಿಕ ಗ್ರಂಥಗಳ ಮಹತ್ವ ಹಾಗೂ ವೈಶಿಷ್ಟ್ಯವಾಗಿರುತ್ತದೆ.

ಧರ್ಮ ಎಂದರೇನು? ಯತೋಽಭ್ಯುದಯ ನಿಃಶ್ರೇಯಸ ಸಿದ್ಧಿಃ **ಸ ಧರ್ಮಃ** | (ವೈಶೇಷಿಕ ಸೂತ್ರ). ಅಂದರೆ ಯಾವುದರಿಂದ ಅಭ್ಯುದಯ ಮತ್ತು ನಿಃಶ್ರೇಯಸ್ಸು ಸಿದ್ಧಿಸುವುದೋ ಅದೇ ಧರ್ಮ. ಇನ್ನೊಂದು ರೀತಿಯಲ್ಲಿ, ಯಾವುದು ನಮ್ಮನ್ನು ಧರಿಸಿ ನಿಲ್ಲಿಸುತ್ತದೋ ಅದೇ ಧರ್ಮ ಎಂದೂ ಹೇಳುತ್ತಾರೆ. ವ್ಯಕ್ತಿಯ ಹಾಗೂ ಸಮಾಜದ ಅಭಿವೃದ್ಧಿಯನ್ನು ಸಾಧಿಸಿ ಯಾವುದು ಜೀವನವನ್ನು ಧರಿಸಿ ನಿಲ್ಲಿಸುತ್ತದೆಯೋ, ಬೆಂಬಲಿಸುತ್ತದೆಯೋ ಜೀವನಾಧಾರವಾಗುತ್ತದೆಯೋ ಆ ಶಕ್ತಿಯೇ ಧರ್ಮ. ಒಟ್ಟಿನಲ್ಲಿ ಧರ್ಮ ಎಂದರೆ ಜೀವಿಯ ಬದುಕು ಉತ್ತಮವಾಗುವ, ಆತ್ಮದ ಹಿತವೂ ಮತ್ತು ಲೋಕಕಲ್ಯಾಣವೂ ಸಾಧಿತವಾಗುವ ಆತ್ಮತತ್ತ್ವ, ಕರ್ಮಗಳು, ನೀತಿ ನಿಯಮಗಳು ಇವುಗಳೆಲ್ಲದರ ಒಕ್ಕೂಟ ಎಂದು ಸಾರಾಂಶವಾಗಿ ಹೇಳಬಹುದು.

ಧರ್ಮ ಹೇಗೆ ತತ್ತ್ವಪರವಾದುದೋ ಹಾಗೆಯೇ ಅದು ಅನುಷ್ಠಾನಪರವಾದುದೂ ಹೌದು. ಧರ್ಮವು ಅಂತರಂಗದ ಸತ್ಯದ ಸ್ವರೂಪವಾಗಿರುವಂತೆ ಅದರ ಅರಿವಿಗೆ ನೆರವಾಗುವ ಅನುಷ್ಠಾನ ಕರ್ಮಗಳನ್ನೂ ಒಳಗೊಂಡಿರುತ್ತದೆ. ಧರ್ಮದ ಸಮಸ್ತ ಲಕ್ಷಣ ಮತ್ತು ವಿಚಾರಗಳು ಹಿಂದೂ ಧರ್ಮದಲ್ಲಿ ಸೇರಿರುವುದು ಮಾತ್ರವಲ್ಲದೆ ಅನೇಕ ವೈಶಿಷ್ಟ್ಯಗಳು ಅದರಲ್ಲಿ ಅಡಗಿವೆ ಎನ್ನುವುದು ಹಿಂದೂಧರ್ಮದ ಹಿರಿಮೆ ಆಗಿರುತ್ತದೆ.

ಹಿಂದೂ ಧರ್ಮದ ವೈಶಿಷ್ಟ್ಯಗಳನ್ನು ಮುಖ್ಯವಾಗಿ ಆರು ಅಂಶಗಳಾಗಿ ವಿಂಗಡಿಸಬಹುದು:

೧. ಪರಮತ ಸಹಿಷ್ಣುತೆ ಮತ್ತು ವಿಶ್ವವ್ಯಾಪಕ ದೃಷ್ಟಿ
೨. ಮಾನವನ ಪವಿತ್ರತೆ ಮತ್ತು ಆತ್ಮದ ಅಮರತ್ವ
೩. ಉಪಾಸನಾ ಸ್ವಾತಂತ್ರ್ಯ ಮತ್ತು ವಿವಿಧ ಸಾಧನಾ ಮಾರ್ಗಗಳು
೪. ವರ್ಣ-ಆಶ್ರಮ ಧರ್ಮ ಹಾಗೂ ಚತುರ್ವಿಧ ಪುರುಷಾರ್ಥಗಳು
೫. ಜೀವನ್ಮುಕ್ತಿ
೬. ಸನಾತನತೆ

## ಪರಮತ ಸಹಿಷ್ಣುತೆ ಮತ್ತು ವಿಶ್ವವ್ಯಾಪಕ ದೃಷ್ಟಿ

ಹಿಂದೂಧರ್ಮವು ಇತರ ಯಾವುದೇ ಮತವನ್ನೂ ದ್ವೇಷಿಸಿರು

ವುದಿಲ್ಲ, ದ್ವೇಷಿಸುವುದೂ ಇಲ್ಲ. ಈ ಧರ್ಮದಲ್ಲಿ ಎಲ್ಲಾ ಮತಗಳಿಗೂ ಸ್ಥಾನವಿದೆ. ಯಾವ ರೀತಿ ಎಲ್ಲಾ ನದಿಗಳೂ ಕೊನೆಗೆ ಸಾಗರವನ್ನು ಸೇರುತ್ತವೆಯೋ ಅದೇ ರೀತಿ ಎಲ್ಲಾ ಧರ್ಮಗಳೂ ಏಕದೇವನನ್ನು ಸೇರಲಿರುವ ವಿವಿಧ ಪಥಗಳು ಎಂಬುದು ಹಿಂದೂಧರ್ಮದ ನಿಲುವು ಆಗಿದೆ. ದೇವನೊಬ್ಬನೇ ಎಂದು ಹೇಳುವ ಈ ಧರ್ಮವು ಅವನಿಗೆ ನಾಮಗಳು ಹಲವು —**ಏಕಂ ಸತ್ ವಿಪ್ರಾ ಬಹುಧಾ ವದಂತಿ** (ಋಗ್ವೇದ) ಎಂಬುದಾಗಿ ಸಾರಿರುತ್ತದೆ. ಮಾನವರು ಯಾವ ಮತವನ್ನು ಅವಲಂಬಿಸಿದ್ದರೂ ಸರಿ, ಅವರೆಲ್ಲರೂ ಏಕದೇವನನ್ನು ಸೇರಲು ವಿವಿಧ ಪ್ರಕಾರಗಳಿಂದ ಪ್ರಯತ್ನಿಸುತ್ತಾರೆ—**ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ** — (ಶ್ರೀಮದ್ಭಗವದ್ಗೀತಾ) ಎಂಬುದಾಗಿ ಸನಾತನ ಹಿಂದೂಧರ್ಮವು ಸಾರಿರುತ್ತದೆ. ಸಮಗ್ರ ಮಾನವ ಬಳಗ ಒಂದು ಎಂದು ಹೇಳಿ **ಸರ್ವೇ ಜನಾಃ ಸುಖಿನೋ ಭವಂತು – ಲೋಕಾಃ ಸಮಸ್ತಾಃ ಸುಖಿನೋ ಭವಂತು**—ಎಂದು ಘೋಷಿಸಿರುವುದು ಹಿಂದೂಧರ್ಮದ ವಿಶ್ವವ್ಯಾಪಕ ಹಾಗೂ ಉದಾರದೃಷ್ಟಿಯ ಬಗೆಗೆ ಉತ್ತಮ ನಿದರ್ಶನವಾಗಿದೆ.

### ಮಾನವನ ಪವಿತ್ರತೆ ಮತ್ತು ಆತ್ಮದ ಅಮರತ್ವ:

ಜೀವಿಗಳೆಲ್ಲ ಅಮೃತಸ್ವರೂಪರು, ಅಮೃತಪುತ್ರರು ಎಂದು ಹಿಂದೂಧರ್ಮವು ಸಾರಿರುತ್ತದೆ. ಆತ್ಮಸ್ವರೂಪಿಯಾದ ಮಾನವನು ಸಾಯುವುದೆಂದರೆ ದೇಹತ್ಯಾಗ ಮಾಡುವುದೆಂದರ್ಥ. ದೇಹತ್ಯಾಗ ಎಂದರೆ ಹಳೇ ಬಟ್ಟೆಯನ್ನು ಆತ್ಮವು ಎಸೆದು ಹೊಸ ಬಟ್ಟೆಯನ್ನು ಧರಿಸಿದಂತೆ. ಆತ್ಮವು ಜೀವನದ ಮೂಲ ಬಲ, ಆಧಾರ. ಅದಕ್ಕೆ ಅಳಿವಿಲ್ಲ. ಅದು ಶಾಶ್ವತವಾದುದು, ಸನಾತನವಾದುದು ಎಂದು ಹಿಂದೂಧರ್ಮವು ಘೋಷಿಸಿರುತ್ತದೆ. ಮಾನವನ ಜೀವಿತಕ್ಕೆ ಹಿನ್ನೆಲೆಯಾಗಿ ಕರ್ಮ ಸಿದ್ಧಾಂತ, ಪುನರ್ಜನ್ಮ ವಾದ ಇವುಗಳನ್ನು ಹೇಳಿರುವ ಹಿಂದೂಧರ್ಮವು ಮನುಷ್ಯ ಜೀವನದಲ್ಲಿ ಕಂಡುಬರುವ ಬುದ್ಧಿ, ಪರಿಸ್ಥಿತಿ, ರೂಪ, ಗುಣ, ಆಶೋತ್ತರಗಳು ಇತ್ಯಾದಿಗಳ ವ್ಯತ್ಯಾಸಕ್ಕೆ ಅರ್ಥಪೂರ್ಣವಾದ ವಿವರಣೆಯನ್ನು ನೀಡಿ ಜೀವನಕ್ಕೆ ಒಂದು ಮೌಲ್ಯ, ಉನ್ನತೋನ್ನತವಾದ ಗುರಿಯನ್ನು ನಿಶ್ಚಯಿಸಿರುತ್ತದೆ.

### ಉಪಾಸನಾ ಸ್ವಾತಂತ್ರ್ಯ ಮತ್ತು ವಿವಿಧ ಸಾಧನಾ ಮಾರ್ಗಗಳು

ಇರುವ ಮಹೋನ್ನತ ದಿವ್ಯ ಸತ್ಯ ಒಂದೇ—ನಾಮಗಳು ಮತ್ತು ರೂಪಗಳು ಹಲವು ಎಂದು ಸಾರಿರುವ ಹಿಂದೂಧರ್ಮವು ಮಾನವನಿಗೆ ಉಪಾಸನಾ ಸ್ವಾತಂತ್ರ್ಯವನ್ನು ನೀಡಿರುತ್ತದೆ. ದೇವರನ್ನು ಪ್ರತಿಯೊಬ್ಬರೂ ಒಂದೇ ರೀತಿಯಲ್ಲಿ ಹೀಗೆಯೇ ಕಾಣಬೇಕು,ಪೂಜಿಸಬೇಕು ಎಂಬ ಕಟ್ಟುಪಾಡುಗಳನ್ನು ಈ ಧರ್ಮವು ವಿಧಾಯಕ ಮಾಡಿ ಧಾರ್ಮಿಕವಾದ ಯಾವ ರೀತಿಯ ನಿರ್ಬಂಧಗಳನ್ನೂ ಹಾಕಿರುವುದಿಲ್ಲ. ಕಲ್ಲು, ಮರಗಳಲ್ಲಿ ಭಗವಂತನನ್ನು ಪೂಜಿಸುವವರು ಈ ಧರ್ಮದಲ್ಲಿ ಗೌರವಪೂರ್ಣರಾಗಿರುವಂತೆ ಪೂಜೆ, ಜಪ, ಧ್ಯಾನ, ಸಮಾಧಿವರೆಗಿನ ವಿವಿಧ ಹಂತಗಳ ವಿವಿಧ ವಿಧಾನಗಳನ್ನು ಅನುಸರಿಸುವ ಸಾಧಕರು,ಆರಾಧಕರು ಈ ಧರ್ಮದಲ್ಲಿ ಸೇರಿರುತ್ತಾರೆ. ವಿವಿಧ ರೀತಿಯ ಸಾಧಕರನ್ನೂ ಪಂಥದವರನ್ನೂ ಸಹನೆ, ಸೌಹಾರ್ದಗಳಿಂದ ಕೂಡಿ ಕಾಣುವುದು ಮಾತ್ರವಲ್ಲದೆ ಎಲ್ಲರ ಪಥವೂ ಭಗವಂತನೆಂಬ ಒಂದೇ ಗುರಿಯೆಡೆಗೆ ಸರಿಯಾದ ರೀತಿಯಲ್ಲಿ ಸಾಧನೆ ಮಾಡಿದಾಗ ಕೊಂಡೊಯ್ಯುತ್ತದೆ ಎಂದು ಹಿಂದೂಧರ್ಮವು ಘೋಷಿಸುತ್ತದೆ.

ಉಪಾಸನಾ ಸ್ವಾತಂತ್ರ್ಯವನ್ನು ಇತ್ತ ಹಿಂದೂಧರ್ಮವು ವಿವಿಧ ಉಪಾಸನಾ ಮಾರ್ಗಗಳನ್ನೂ ಸಹ ಹೇಳಿರುವುದು ಅದರ ಇನ್ನೊಂದು ಮಹತ್ವವಾಗಿದೆ. ಕೆಲಸದ ಕಡೆಗೇ ಒಲವು ಜಾಸ್ತಿಯಾಗಿ ಕರ್ತವ್ಯಗಳನ್ನು ನಿಷ್ಠೆಯಿಂದ ಮಾಡುವವರಿಗೆ ಕೆಲಸದ ಮೂಲಕವೇ ಜೀವನದಲ್ಲಿ ಸುಖ, ಬಾಳಿನ ಪರಮಗುರಿಯಾದ ಆತ್ಮಸಾಕ್ಷಾತ್ಕಾರ ಸಾಧ್ಯ ಎಂದು ಹೇಳಿ ಅದನ್ನು ಕರ್ಮಯೋಗ ಎಂದು ಕರೆಯಲಾಗಿದೆ. ಭಾವುಕತೆಯ ಮನೋಭಾವದವರಿಗೆ ಪ್ರೀತಿ ಭಾವನೆಗಳ ಮೂಲಕ ಜೀವನದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಭಗವಂತನ ನೆಲೆಯನ್ನು ಸೇರಬಹುದು ಎಂದು ಹೇಳಿ ಆ ಮಾರ್ಗವನ್ನು ಭಕ್ತಿಯೋಗ ಎಂದು ಹೇಳಲಾಗಿದೆ.

ಮನಸ್ಸನ್ನು ಕೇಂದ್ರೀಕರಿಸುತ್ತಾ ಮನಶ್ಶಕ್ತಿಯ ಉದಾತ್ತೀಕರಣದ ಮೂಲಕ ಈಶ್ವರ ಸಾಕ್ಷಾತ್ಕಾರ ಪಡೆಯಲು ಸಾಧ್ಯ ಎಂದು ಹೇಳಿ ಅದನ್ನು ರಾಜಯೋಗ ಎಂದು ಹೆಸರಿಸಲಾಗಿದೆ. ಜೀವನವನ್ನು ವೈಜ್ಞಾನಿಕ ಹಾಗೂ ವೈಚಾರಿಕ ದೃಷ್ಟಿಯಿಂದ ನೋಡಿ ಜಗತ್ತಿನಲ್ಲಿ ಯಾವುದು ಸತ್ಯ, ಎಷ್ಟು ಸತ್ಯ ಎಂದು ತರ್ಕ, ವಿಚಾರಗಳಿಂದ ಪರಿಶೀಲನೆ ಮಾಡುತ್ತಾ ಸತ್ಯವನ್ನೇ ಆಧರಿಸಿ ಬಾಳುತ್ತಾ ಕೊನೆಗೆ ಸದ್‌ವಸ್ತುವಿನ ಸಾಕ್ಷಾತ್ಕಾರ ಸಾಧ್ಯ ಎಂದು ಹೇಳಿ ಅದನ್ನು ಜ್ಞಾನಯೋಗ ಎಂದು ಕರೆಯಲಾಗಿದೆ. ಈ ನಾಲ್ಕು ವಿಧದ ಸಾಧನಾ ಪಥಗಳು ವ್ಯಕ್ತಿಯ ಸ್ವಭಾವ, ಗುಣ, ಧರ್ಮಗಳನ್ನು ಅನುಸರಿಸಿ ಆಚರಿಸಲು ಅನುಕೂಲವಾಗಿದ್ದು ಕಾಲ, ದೇಶ, ಜನಾಂಗ, ಮತಗಳ ಭೇದವಿಲ್ಲದೆ ಅನುಷ್ಠಾನಕ್ಕೆ ತರಲು ಸಾಧ್ಯವಿರುತ್ತದೆ ಎಂಬುದು ಹಿಂದೂಧರ್ಮದ ಆಶ್ವಾಸನೆಯಾಗಿರುತ್ತದೆ.

### ವರ್ಣಾಶ್ರಮ ಧರ್ಮ ಮತ್ತು ಚತುರ್ವಿಧ ಪುರುಷಾರ್ಥಗಳು

ಹಿಂದೂಧರ್ಮದ ಇನ್ನೊಂದು ವೈಶಿಷ್ಟ್ಯವೇ ವರ್ಣ-ಆಶ್ರಮ ವಿಭಾಗ ಮತ್ತು ಚತುರ್ವಿಧ ಪುರುಷಾರ್ಥಗಳಾಗಿವೆ. ಇವುಗಳು ಇಳೆಯಲ್ಲಿ ಜನ್ಮತಳೆದ ಮಾನವನ ಬದುಕಿನ ವಿವಿಧ ಹಂತಗಳಲ್ಲಿ ದಿವ್ಯಜೀವನದ ಪ್ರಕಾಶ ಹೊಮ್ಮಿ ತನ್ಮೂಲಕ ಜೀವನವು ಆತ್ಮಸಾಕ್ಷಾತ್ಕಾರಕ್ಕೆ ಸಾಧನವಾಗಲು ಹಾಗೂ ಜಗತ್ತಿಗೆ ಹಿತಕರವಾಗಲೂ ಸಹಕಾರಿಯಾಗುವಂತೆ ವ್ಯವಸ್ಥೆ ಮಾಡಲ್ಪಟ್ಟ ವಿಶೇಷವಾದ ಏರ್ಪಾಡು ಆಗಿರುತ್ತದೆ. ಗುಣ ಕರ್ಮಗಳಿಗೆ ಅನುಸಾರವಾಗಿ ಸಮಾಜದಲ್ಲಿನ ವಿವಿಧ ರೀತಿಯ ಜನರ ವರ್ಣ ವಿಭಜನೆ; ಜೀವನದ ವಯೋಧರ್ಮದ ಅನುಸಾರವಾಗಿ ಮಾನವನು ಸುಖವನ್ನು ಪಡೆಯಲು ಅನುಸರಿಸಬೇಕೆಂದು ಸೂಚಿಸಿರುವ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ ಎಂಬ ಆಶ್ರಮ ವಿವರಗಳು; ಆಯಾಯ ಆಶ್ರಮಗಳಿಗೆ ಅನುಕೂಲವಾದ ಮತ್ತು ಅರ್ಥಪೂರ್ಣವಾದ ಧರ್ಮ

ನಿಯಮಾವಳಿಗಳು; ಸಾರ್ಥಕ ಬದುಕಿಗೆ ಆವಶ್ಯಕವಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥ ವಿವರಗಳು—ಇವುಗಳು ಹಿಂದೂಧರ್ಮದಲ್ಲಿ ಸವಿಸ್ತಾರವಾಗಿ, ತರ್ಕ ಬದ್ಧವಾಗಿ ನಿರೂಪಿಸಲ್ಪಟ್ಟಿರುತ್ತವೆ.

**ಜೀವನ್ಮುಕ್ತಿ**

ಜೀವನದ ಅಂತಿಮ ಗುರಿಯೇನು? ಎಂಬುದನ್ನು ಹೇಳುತ್ತಾ ಆತ್ಮಸಾಕ್ಷಾತ್ಕಾರವೇ ಅರ್ಥಾತ್ ಭಗವದತ್ಸಾಕ್ಷಾತ್ಕಾರವೇ ಬದುಕಿನ ಮಹೋನ್ನತ ಗುರಿ ಎಂದು ಹಿಂದೂಧರ್ಮವು ಘೋಷಿಸಿರುತ್ತದೆ. ಶಾಶ್ವತ ಹಾಗೂ ದಿವ್ಯಾನಂದಾನುಭವವೇ ಆತ್ಮಸಾಕ್ಷಾತ್ಕಾರ ಎಂದು ಹೇಳಿರುವ ಹಿಂದೂಧರ್ಮವು ಆತ್ಮ ಸಾಕ್ಷಾತ್ಕಾರವು ಈ ಜನ್ಮದಲ್ಲೇ —ಈ ದೇಹ ಸಹಿತವಿರುವಾಗಲೇ ಇಲ್ಲೇ ಸಾಧ್ಯ ಎಂದು ಪ್ರತ್ಯೇಕ ವಾಗಿ ಸ್ಪಷ್ಟಪಡಿಸಿ ಅದನ್ನು "ಜೀವನ್ಮುಕ್ತಿ" ಎಂದು ಕರೆದಿರುತ್ತದೆ.

**ಸನಾತನತೆ-ಭವ್ಯಪರಂಪರೆ**

ಹಿಂದೂಧರ್ಮದ ತತ್ತ್ವವಿಚಾರಗಳು, ಬೋಧನಾ ವಿವರಗಳು ಇವುಗಳೆಲ್ಲ ಕಾಲ, ದೇಶ, ಜನಾಂಗಗಳ ಕಟ್ಟುನಿಟ್ಟುಗಳನ್ನು ಮೀರಿ ನಿಂತವುಗಳಾಗಿದ್ದು ವಿಶ್ವದ ಯಾವ ಮೂಲೆಯಲ್ಲೂ ಕೂಡ ಕ್ರಮ ವರಿತು ಅನುಷ್ಠಾನ ಮಾಡುವವರಿಗೆ ಫಲವೀಯುವಂತಹ "ಕಲ್ಪ" ವೃಕ್ಷಗಳಂತಿವೆ. ಅದೆಷ್ಟೋ ರೀತಿಯ ಧಾರ್ಮಿಕ ಹಾಗೂ ಸಾಂಸ್ಕೃತಿಕ ಆಘಾತಗಳನ್ನು ಹಿಂದೂಧರ್ಮವು ಸಹಸ್ರಾರು ಸಂವತ್ಸರಗಳಿಂದ ಎದುರಿಸುತ್ತಾ ಬಂದಿದೆ. ಹಾಗಿದ್ದರೂ ಕೂಡ ಸನಾತನ ತತ್ತ್ವಶಕ್ತಿ ಸಂಪನ್ನವಾದ ಹಿಂದೂಧರ್ಮ ಇಂದೂ ಕೂಡ ಸಬಲ, ಸದೃಢ ಮೃತ್ಯುಂಜಯ ಧರ್ಮವಾಗಿ ಉಳಿದು ಬೆಳಗುತ್ತಿದೆ.

ಕಾಲಕಾಲಕ್ಕೆ ಹಿಂದೂಧರ್ಮದ ಮೂಲ ಸಿದ್ಧಾಂತಗಳನ್ನು ಜೀವನದಲ್ಲಿ ಅನುಷ್ಠಾನಮಾಡಿ ಧರ್ಮದ ಜ್ವಲಂತ ನಿದರ್ಶನವಾಗಿ ಸಹಸ್ರಾರು ಸಾಧುಸಂತರು, ಯೋಗಿಗಳು, ಅನೇಕ ಮಹಾಪುರುಷರು ಭಾರತದಲ್ಲಿ ಬಾಳಿ ಬೆಳಗಿ ಹಿಂದೂಧರ್ಮದ ದಿವ್ಯಶಕ್ತಿಯ ಪ್ರಕಾಶ ವನ್ನು ಮನುಕುಲಕ್ಕೆ ಬೀರಿರುತ್ತಾರೆ. ಪುರಾತನಕಾಲದ ವೈದಿಕ ಮಹರ್ಷಿ ಗಳು, ಶ್ರೀರಾಮ, ಶ್ರೀಕೃಷ್ಣ, ಶ್ರೀಶಂಕರಾಚಾರ್ಯ ಇತ್ಯಾದಿಯಾಗಿ ಅನೇಕಾನೇಕ ಮಹಾಪುರುಷರು ಹಿಂದೂಧರ್ಮವು ಜೀವಂತವಾದ ಸನಾತನವಾದ ಧರ್ಮ ಎಂಬುದನ್ನು ತಮ್ಮ ಜೀವನ ಮತ್ತು ಸಂದೇಶ ಗಳ ಮೂಲಕ ಲೋಕಕ್ಕೆ ಸಾರಿರುತ್ತಾರೆ.

ಆಧುನಿಕ ಕಾಲದಲ್ಲಿ ಶ್ರೀರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಮಹಾತ್ಮಾ ಗಾಂಧೀಜಿ, ಮಹಾಯೋಗಿ ಶ್ರೀ ಅರವಿಂದರು ಮೊದಲಾದ ಪ್ರಾತಃಸ್ಮರಣೀಯರಾದ ಪುಣ್ಯಪುರುಷರು ಹಿಂದೂಧರ್ಮದ ಹಿರಿದಾದ ತತ್ತ್ವಗಳ ಉಜ್ವಲ ಉದಾಹರಣೆ ಯಾಗಿ ಬಾಳಿ ಬೆಳಗಿದುದು ಈ ಧರ್ಮದ ಸಾರ್ವಕಾಲಿಕ ಶಕ್ತಿ, ಪ್ರಸ್ತುತತೆಗಳಿಗೆ ನಿದರ್ಶನವಾಗಿದೆ. ಹಾಗೆಯೇ, ಇಂದಿಗೂ ಕೂಡ ಮಾನವಬಳಗಕ್ಕೆ ಬೆಳಕನ್ನು ತೋರಲು ನೆರವಾಗುವಂತೆ ಮಹಾ ಪುರುಷರನ್ನು ಉತ್ಪತ್ತಿ ಮಾಡುವ ಕುಂದದ ಸಾಮರ್ಥ್ಯವನ್ನು ಸನಾತನ ಹಿಂದೂಧರ್ಮವು ಹೊಂದಿರುತ್ತದೆ ಎಂಬುದನ್ನೂ ಸಹ ಈ ನಿದರ್ಶನವು ಸ್ಪಷ್ಟಪಡಿಸುತ್ತದೆ.

ಹೀಗೆ, ಅತಿ ಪ್ರಾಚೀನವಾದ ಪರಂಪರೆಯುಳ್ಳ, ಸಹಸ್ರಾರು ಮಂದಿ ಮಹರ್ಷಿಗಳು, ಸಾಧುಸಂತರು, ಅವತಾರಪುರುಷರು, ಯೋಗಿ ಮಹಾತ್ಮರು, ಇವರಿಂದ ಜೀವನದಲ್ಲಿ ದೃಢೀಕರಿಸಲ್ಪಟ್ಟು ಪ್ರಕಾಶ ಗೊಂಡು ಸಾಗಿಬಂದಿರುವ ಸನಾತನ ಹಿಂದೂಧರ್ಮವು ಶಕ್ತಿ ಸಂಪನ್ನ ವಾಗಿದೆ, ನಿತ್ಯ ನೂತನವಾಗಿದೆ. ಇಪ್ಪತ್ತೊಂದನೇ ಶತಮಾನದ ಇಂದಿನ ಈ ವೈಜ್ಞಾನಿಕ, ತಾಂತ್ರಿಕ, ಯಾಂತ್ರಿಕವಾದ ನವನಾಗರಿಕತೆ-ಸಿದ್ಧಿಗಳ ವೈಭವದ ಕಾಲಘಟ್ಟದಲ್ಲಿ ಹಿಂದೂಧರ್ಮದಲ್ಲಿ ಸತ್ಯ ವಿದೆಯೇ? ಅದರ ತತ್ತ್ವಗಳು ಇಂದಿಗೂ ಅನುಷ್ಠಾನಕ್ಕೆ ಯೋಗ್ಯವೇ? ಎಂದು ಭಾವಿಸುವವರಿಗೆ, ಪ್ರಶ್ನಿಸುವವರಿಗೆ, ಗಂಭೀರವಾಗಿ ಗೌರವ ಯುತವಾಗಿ ತರ್ಕಬದ್ಧವಾಗಿ ಸದುತ್ತರವನ್ನು ಸಮರ್ಥವಾದ ರೀತಿಯಲ್ಲಿ ನೀಡುವ ಸಾಮರ್ಥ್ಯವನ್ನು ಸನಾತನ ಹಿಂದೂಧರ್ಮವು ಇಂದಿಗೂ ಹೊಂದಿರುತ್ತದೆ.

# ವಿಶ್ವಧರ್ಮ

**ಜಗತ್ತಿನಲ್ಲಿ ಎಂದಾದರೂ ಒಂದು ವಿಶ್ವಧರ್ಮ ಎನ್ನುವುದು ಅಸ್ತಿತ್ವಕ್ಕೆ ಬರುವುದಾದರೆ ಅದು ಕಾಲ ದೇಶಗಳ ಎಲ್ಲೆಯನ್ನು ಮೀರಿರು ವಂಥದ್ದಾಗಿರಬೇಕು ; ಅದು ತಾನು ಯಾವ ದೇವರನ್ನು ಕುರಿತು ಬೋಧಿಸುತ್ತದೆಯೋ ಆ ದೇವರಷ್ಟೇ ಅನಂತವಾಗಿರಬೇಕು; ಆ ಧರ್ಮದ ಪ್ರಕಾರ ಕೃಷ್ಣನ ಅನುಯಾಯಿಗಳಿಗೆ ಹೇಗೊ ಹಾಗೆ ಕ್ರಿಸ್ತನ ಅನುಯಾಯಿಗಳಿಗೂ ಲಭ್ಯವಾಗಿರಬೇಕು; ಅಷ್ಟೇ ಅಲ್ಲ, ಸಂತರಿಗೆ ಹೇಗೊ ಹಾಗೆ ಪಾಪಿಗಳಿಗೂ ಅದು ದೊರಕುವಂತಿರಬೇಕು. ಅದು ಬ್ರಾಹ್ಮಣಧರ್ಮ, ಬೌದ್ಧಧರ್ಮ, ಕ್ರೈಸ್ತಧರ್ಮ, ಮಹಮ್ಮದೀಯ ಧರ್ಮ ಎಂದು ಮಾತ್ರವಾಗಿರದೆ ಈ ಎಲ್ಲದರ ಮೊತ್ತವಾಗಿರಬೇಕು. ಹಾಗೆ ಆಗಿದ್ದೂ ಬೆಳವಣಿಗೆಗೆ ಅದರಲ್ಲಿ ಅನಂತ ಅವಕಾಶವಿರಬೇಕು. ಆ ಧರ್ಮ ತನ್ನ ವೈಶಾಲ್ಯದಿಂದ ತನ್ನ ಅನಂತ ಬಾಹುಗಳನ್ನು ಚಾಚಿ ಯಾವ ಭೇದವೂ ಇಲ್ಲದೆ ಎಲ್ಲರನ್ನೂ ಆಲಿಂಗಿಸಿಕೊಳ್ಳುವಂತೆ ಇರಬೇಕು. ಪಶುಪ್ರಾಯನಾದ ಕಾಡುಮನುಷ್ಯನಿಂದ ಹಿಡಿದು ತನ್ನ ಹೃದಯವೈಶಾಲ್ಯ ಮತ್ತು ಬುದ್ಧಿಶಕ್ತಿಯಿಂದ ಅತ್ಯುನ್ನತ ಸ್ಥಿತಿಗೇರಿ ಅವನು ಮನುಷ್ಯಮಾತ್ರನೆ ಎಂದು ಸಮಾಜ ಆಶ್ಚರ್ಯದಿಂದ ಯಾರನ್ನು ನೋಡುತ್ತದೆಯೋ ಅಂಥ ವ್ಯಕ್ತಿಯವರೆಗೆ ಎಲ್ಲರನ್ನೂ ಆ ಧರ್ಮ ಒಳಗೊಳ್ಳುವಂತೆ ಇರಬೇಕು. ಆ ಧರ್ಮದ ಆಡಳಿತ ವ್ಯವಸ್ಥೆಯಲ್ಲಿ ತನ್ನನ್ನು ಒಪ್ಪದವರನ್ನು ಹಿಂಸಿಸುವುದಕ್ಕಾಗಲಿ, ಇತರ ಧರ್ಮಗಳ ವಿಷಯದಲ್ಲಿ ಅಸಹನೆಗಾಗಲಿ ಸ್ವಲ್ಪವೂ ಅವಕಾಶವಿರಕೂಡದು. ಪ್ರತಿಯೊಬ್ಬ ಪುರುಷನಲ್ಲಿಯೂ ಪ್ರತಿಯೊಬ್ಬಳು ಸ್ತ್ರೀಯ ರಲ್ಲಿಯೂ ಇರುವ ದಿವ್ಯತೆಯನ್ನು ಅದು ಗುರುತಿಸುತ್ತದೆ. ಅದರ ವ್ಯಾಪ್ತಿಯೆಲ್ಲವೂ, ಅದರ ಶಕ್ತಿಯೆಲ್ಲವೂ ಮಾನವತೆ ತನ್ನ ನೈಜ, ದಿವ್ಯಸ್ವಭಾವವನ್ನು ಅರಿಯಲು ನೆರವಾಗುವಂತಿರಬೇಕು.**

**— ಸ್ವಾಮಿ ವಿವೇಕಾನಂದ**